ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ/50/ಇಎಸ್‌ಟಿ(1)ಎ/2008 1320

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ,
ಬೆಂಗಳೂರು-560 001.
ದಿನಾಂಕ: 24.07.2018

## ಜ್ಞಾಪನ

**ವಿಷಯ** : ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ಸಂಸ್ಥೆಗಳ ಡ್ರಾಯಿಂಗ್ ಮತ್ತು ಡಿಸ್‌ಬರ್ಸಿಂಗ್ ಅಧಿಕಾರ ಕುರಿತು.

**ಉಲ್ಲೇಖ:** 1. ಸರ್ಕಾರದ ಆದೇಶ ಸಂಖ್ಯೆ: ಇಡಿ/32/ಡಿಟಿಇ/81, ದಿನಾಂಕ: 06.06.1981.
2. ಸರ್ಕಾರದ ಆದೇಶ ಸಂಖ್ಯೆ: ಇಡಿ/133/ಟಿಇಸಿ/2009, ದಿನಾಂಕ: 28.10.2009
3. ನಿರ್ದೇಶನಾಲಯದ ಪತ್ರ ಸಂಖ್ಯೆ: ಡಿಟಿಇ/50/ಇಎಸ್‌ಟಿ(1)ಎ/2008, ದಿನಾಂಕ: 06.09.2016
4. ಪ್ರಾಂಶುಪಾಲರು, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾವೇರಿ ಇವರ ಪತ್ರ ಸಂಖ್ಯೆ: ಸಇಕಾಹಾ/10/ಇಎಸ್‌ಟಿ/ 2016-17/372, ದಿನಾಂಕ: 25.06.2018

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1) ರ ಸರ್ಕಾರದ ಆದೇಶದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಮಂಜೂರಾಗಿರುವ ಸಹಾಯಕ ಆಡಳಿತಾಧಿಕಾರಿ / ರಿಜಿಸ್ಟ್ರಾರ್‌ಗಳಿಗೆ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ವೇತನವನ್ನು ಮತ್ತು ಎಸಿ ಮತ್ತು ಡಿಸಿ ಬಿಲ್ಲುಗಳಿಂದ ಫಂಡ್ಸ್‌ನ್ನು ಡ್ರಾ ಮಾಡಲು ಡ್ರಾಯಿಂಗ್ ಮತ್ತು ಡಿಸ್‌ಬರ್ಸಿಂಗ್ ಅಧಿಕಾರವನ್ನು ನೀಡಲಾಗಿದೆ. ಉಲ್ಲೇಖ(2) ರ ಸರ್ಕಾರದ ಆದೇಶದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಸಹಾಯಕ ಆಡಳಿತಾಧಿಕಾರಿಯವರುಗಳಿಗೆ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ವೇತನವನ್ನು ಮತ್ತು ಎಸಿ ಮತ್ತು ಡಿಸಿ ಬಿಲ್ಲುಗಳಿಂದ ಫಂಡ್ಸ್‌ನ್ನು ಡ್ರಾ ಮಾಡಲು ಡ್ರಾಯಿಂಗ್ ಮತ್ತು ಡಿಸ್‌ಬರ್ಸಿಂಗ್ ಅಧಿಕಾರವನ್ನು ನೀಡಲಾಗಿದೆ. ಸಂಸ್ಥೆಗಳಲ್ಲಿ ಸಹಾಯಕ ಆಡಳಿತಾಧಿಕಾರಿ ಮತ್ತು ರಿಜಿಸ್ಟ್ರಾರ್ ಹುದ್ದೆಗಳು ಖಾಲಿಯಿದ್ದಲ್ಲಿ ಸದರಿ ಸಂಸ್ಥೆಯ ಪ್ರಾಂಶುಪಾಲರು ಬಟವಾಡೆ ಅಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಾರೆಂದು ಉಲ್ಲೇಖ(3) ರಲ್ಲಿ ತಿಳಿಸಲಾಗಿತ್ತು. ಆದಾಗ್ಯೂ ಸಹ ಸಂಸ್ಥೆಯಲ್ಲಿ ಸಹಾಯಕ ಆಡಳಿತಾಧಿಕಾರಿ / ರಿಜಿಸ್ಟ್ರಾರ್ ಹುದ್ದೆ ಖಾಲಿಯಿದ್ದು, ಡ್ರಾಯಿಂಗ್ ಮತ್ತು ಡಿಸ್‌ಬರ್ಸಿಂಗ್ ಅಧಿಕಾರವನ್ನು ಪ್ರಾಂಶುಪಾಲರು ನಿರ್ವಹಿಸಲು ಆದೇಶ ನೀಡಬೇಕೆಂದು ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನ ಸಂಸ್ಥೆಗಳಲ್ಲಿ ಸಹಾಯಕ ಆಡಳಿತಾಧಿಕಾರಿ / ರಿಜಿಸ್ಟ್ರಾರ್ ಹುದ್ದೆ ಖಾಲಿಯಿದ್ದಲ್ಲಿ, ಸದರಿ ಹುದ್ದೆ ಭರ್ತಿ ಆಗುವವರೆಗೆ ಸಂಸ್ಥೆಯ ಆಡಳಿತಾತ್ಮಕ ಹಿತದೃಷ್ಟಿಯಿಂದ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ವೇತನವನ್ನು ಮತ್ತು ಎಸಿ ಮತ್ತು ಡಿಸಿ ಬಿಲ್ಲುಗಳಿಂದ ಫಂಡ್ಸ್‌ನ್ನು ಡ್ರಾ ಮಾಡಲು ಡ್ರಾಯಿಂಗ್ ಮತ್ತು ಡಿಸ್‌ಬರ್ಸಿಂಗ್ ಅಧಿಕಾರವನ್ನು ಪ್ರಾಂಶುಪಾಲರು ತಾತ್ಕಾಲಿಕವಾಗಿ ನಿರ್ವಹಿಸಲು ಅನುಮತಿ ನೀಡಲಾಗಿದೆ.

**"ಕರಡು ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ"**

ಆಡಳಿತಾಧಿಕಾರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು.

**ಗೆ:-**

ಪ್ರಾಂಶುಪಾಲರು, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು / ಸರ್ಕಾರಿ ಪಾಲಿಟೆಕ್ನಿಕ್.

**ಪ್ರತಿ:-**

1. ಜಿಲ್ಲಾ ಖಜಾನಾಧಿಕಾರಿಗಳು, ಜಿಲ್ಲಾ ಖಜಾನೆ (ಸಂಬಂಧಪಟ್ಟ ಪ್ರಾಂಶುಪಾಲರ ಮುಖಾಂತರ);
2. ಪತ್ರಾಂಕಿತ ಉಪ-ಖಜಾನಾಧಿಕಾರಿಗಳು, ತಾಲ್ಲೂಕು ಖಜಾನೆ (ಸಂಬಂಧಪಟ್ಟ ಪ್ರಾಂಶುಪಾಲರ ಮುಖಾಂತರ);
3. ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು 4. ಕಛೇರಿ ಪ್ರತಿ.

IL-18-19